ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 79-84
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ವೀಣಾಶಾಂತೇಶ್ವರ ಅವರ 'ಮುಳ್ಳುಗಳು': ಒಂದು ಅವಲೋಕನ

**ಡಾ.ಹೆಚ್.ಎಸ್. ಪ್ರೇಮಲತ**
ಕನ್ನಡ ಸಹ ಪ್ರಾಧ್ಯಾಪಕರು, ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ.

***Abstract:***
*ಹೊಸಗನ್ನಡದ ನವ್ಯ ಕಾಲಘಟ್ಟದ ಪ್ರತಿಭಾವಂತ ಬರಹಗಾರ್ತಿಯಾಗಿರುವ ಡಾ. ವೀಣಾಶಾಂತೇಶ್ವರ ಅವರು ಕನ್ನಡದ ಜನಪ್ರಿಯ ಕಥೆಗಾರ್ತಿಯಾಗಿ ಹೆಸರಾದವರು. ವೃತ್ತಿಯಿಂದ ಅಧ್ಯಾಪಕಿಯಾಗಿ, ಪ್ರವೃತ್ತಿಯಿಂದ ಸಾಹಿತಿಯಾಗಿ ಕನ್ನಡನಾಡಿನ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಕ್ಕೆ ಸರಿಸುಮಾರು ಐದು ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರ ಕಥೆಗಳು ಜಗತ್ತಿನ ಹಲವು ಭಾಷೆಗಳಿಗೆ ಅನುವಾದಗೊಂಡಿರುವುದು ವಿಶೇಷ. ಮಹಿಳಾ ಸಮಸ್ಯೆಗಳನ್ನು ವ್ಯಕ್ತಿಗತ ನೆಲೆಯಲ್ಲಿ ಪ್ರತಿಪಾದಿಸಿರುವ ಡಾ. ವೀಣಾಶಾಂತೇಶ್ವರ ಅವರು ಸ್ತ್ರೀ ಸ್ವಾತಂತ್ರ್ಯ, ಸ್ವಾಭಿಮಾನ ಹಾಗೂ ಸ್ವಾವಲಂಬನೆಯ ಆಶಯಗಳನ್ನು ತಮ್ಮ ಕಥೆಗಳಲ್ಲಿ ಅರ್ಥಪೂರ್ಣಗೊಳಿಸಿದ್ದಾರೆ.*

***Keywords:*** *ವೀಣಾಶಾಂತೇಶ್ವರ, ಮುಳ್ಳುಗಳು, ಮಹಿಳಾ ಸಮಸ್ಯೆ, ಸ್ತ್ರೀ ಸ್ವಾತಂತ್ರ್ಯ.*

**ಪೀಠಿಕೆ**

'ಮುಳ್ಳುಗಳು' ಡಾ. ವೀಣಾಶಾಂತೇಶ್ವರರ ಪ್ರಮುಖ ಕಥೆಗಳಲ್ಲಿ ಒಂದು. ಈ ಕಥೆಯು ಕಾಲೇಜಿನ ಅಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಅವಿವಾಹಿತ ಹೆಣ್ಣುಮಗಳೊಬ್ಬಳು ಪುರುಷ ಪ್ರಧಾನ ಸಮಾಜವು ಒಂಟಿಮಹಿಳೆಯನ್ನು ನೋಡುವ ರೀತಿಗೆ ತನ್ನನ್ನು ಕೇಂದ್ರೀಕರಿಸಿಕೊಂಡು ಶೋಧಿಸುವ ಕಥಾಭಿತ್ತಿಯನ್ನು ಹೊಂದಿದೆ. ಡಾ. ವೀಣಾಶಾಂತೇಶ್ವರ ಅವರ ಈ ಕಥೆಯ ಶೀರ್ಷಿಕೆಯೆ ಹೂವಿನಂತೆ ಮೃದುವಾದ ಸ್ತ್ರೀ ಮನಸ್ಸನ್ನು ಘಾಸಿಗೊಳಿಸುವ ಪುರುಷ ನೋಟಗಳನ್ನುವಿಶ್ಲೇಷಣೆಗೆ ಒಳಪಡಿಸುತ್ತದೆ. ಜೀವನೋತ್ಸಾಹವನ್ನು ಕಳೆದುಕೊಂಡು ಬದುಕನ್ನು ಯಾಂತ್ರಿಕವಾಗಿ ಗ್ರಹಿಸುವ ಕಣ್ಣಿಗೆ ಬೆಳಗಿನಿಂದ ಸಂಜೆಯವರೆಗಿನ ಪ್ರತಿ ಘಟನೆಗಳು, ಹಗಲು, ಇರುಳು, ನಿದ್ರೆ, ಎಚ್ಚರದ ಪ್ರತಿಕ್ಷಣವೂ ಬೇಸರ ತರುವುದು ಸಹಜವೇ. ಹಾಗಾಗಿಯೇ ಬದುಕಿನ ತುಂಬಾ ಬೇಸರವನ್ನೇ ಹಾಸಿಹೊದ್ದುಕೊಂಡಿರುವ ಅಶಾಂತ ಮನಸ್ಸಿನ ಕಥಾನಾಯಕಿ ಶಾಂತಿ ಮಳೆಗಾಲದ ಜಿಟಿಜಿಟಿ ಸಪ್ಪಳ ತರುವ ಬೇಸರ, ರಾತ್ರಿಯಲ್ಲಿ ಕೋಣೆಯ ಹೊರಗೆ–ಒಳಗೆ ಕಾಣುವ ಕತ್ತಲು, ಸಲ್ಲದ ವಿಚಾರಗಳಿಂದ ರಾತ್ರಿಯಿಡೀ ನಿದ್ದೆಗಾಗಿ ಹೊರಳಾಡಿ ದಿನವನ್ನು ಕಳೆಯುವ ವೇಳೆಗೆ ಮೆತ್ತನೆಯ ಹಾಸಿಗೆ ಕೂಡ ಮುಳ್ಳಾಗಿ ಕಾಡುವುದರೊಂದಿಗೆ ಯಾವಾಗ ಬೆಳಗಾಗುವುದೋ ಎಂದು ಹಂಬಲಿಸುವುದು ಆಕೆಯ ಒಂಟಿ ಬದುಕಿನ ನೀರಸ. ಏಕತಾನತೆಯನ್ನು ನೀಗಿಕೊಂಡು ಜೀವನ ಸಂಗಾತಿಯ ಜೊತೆಗಿನ ಬೆಚ್ಚನೆಯ ಜೀವಂತ ಬದುಕಿನ ಸಹಜ ಬೆಳಕಿಗಾಗಿ ಹಂಬಲಿಸುವುದರ ಸಂಕೇತವಾಗಿದೆ.

"ಈ ಹಿಂದೆ ಕಾಲೇಜು ವಿದ್ಯಾರ್ಥಿನಿಯಾಗಿದ್ದ ಸಂದರ್ಭದಲ್ಲಿ ಅಭ್ಯಾಸದ ತಲೆನೋವೊಂದನ್ನು

***Please cite this article a:*** ಪ್ರೇಮಲತ. ಹೆಚ್.ಎಸ್. (2023). ವೀಣಾಶಾಂತೇಶ್ವರ ಮುಳ್ಳುಗಳು: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 79–84.

ಹೊರತುಪಡಿಸಿದರೆ ತಲೆದಿಂಬಿಗೆ ತಲೆಯಿಟ್ಟೊಡನೆ ಕಣ್ಣುಗಳು ತಾವಾಗಿಯೇ ಮುಚ್ಚಿ ಬಿಡುತ್ತಿದ್ದವು. ಕಣ್ತೆರೆದಾಗ ಅರ್ಧ ಹಗಲಾಗಿರುತ್ತಿತ್ತು. ಸುಖನಿದ್ರೆ, ಸವಿಗನಸು... ಆಗಿನ ಎಲ್ಲವೂ ಹಾಗೆಯೇ ಸಿಹಿ ಸಿಹಿ"[1] ಎಂದು ನೆನಪು ಮಾಡಿಕೊಳ್ಳುವ ಶಾಂತಿ ತಾನು ಉಪನ್ಯಾಸಕಿಯಾಗಿ ಪೂರ್ವಸಿದ್ಧತೆ ಮಾಡಿಕೊಳ್ಳುವುದು ತರಗತಿಯಲ್ಲಿ ನಿಂತು ಪಾಠ ಮಾಡುವಾಗಲೂ ವಿದ್ಯಾರ್ಥಿಗಳು ಕಾಲು ಚಾಚಿ ಆಕಳಿಸುತ್ತಾ ಕುಳಿತು ತನ್ನ ಮುಖ ನೋಡುವ ಸಂದರ್ಭದಲ್ಲಿಯೂ ಅವರ ಹದ್ದಿನ ಕಣ್ಣುಗಳು ತನ್ನ ಮೇಲೆ–ಮುಖ, ಕೊರಳು, ಎದೆ, ಕಾಲು, ಚಪ್ಪಲಿಯವರೆಗೂ ಹರಿದಾಡುವುದು ಕೂಡ ಮುಳ್ಳು ಚುಚ್ಚಿದ ಅನುಭವದಂತೆ ಭಾವಿಸುವುದು ಆಕೆಯ ಒಂಟಿ ಬಾಳಿನ ಅನಿಶ್ಚಿತ, ಅಶಾಂತ ಹಾಗೂ ಅಸಹನೆಯ ಮನಸ್ಥಿತಿಯ ಪ್ರತಿರೂಪವಾಗಿಯೇ ಗೋಚರಿಸುತ್ತದೆ. ಪ್ರತಿದಿನ ಬೆಳಿಗ್ಗೆ ಹಾಸ್ಟೆಲಿನ ತನ್ನ ಕೋಣೆಗೆ ಕಸ ಹೊಡೆಯಲು ಬರುವ Peon ದನಿಗೂ "ಎದ್ದೊಡನೆ ಶನಿದರ್ಶನ, ಅದೂ ಕಸಬರಿಗೆಯೊಂದಿಗೆ" ಎಂದು ಬೇಸರಿಸುವ ಆಕೆ ಹಿಂದೊಮ್ಮೆ ತವರಿಗೆ ಮಕ್ಕಳೊಂದಿಗೆ ಬಂದ ಅಕ್ಕ ನಗುತ್ತಾ "ಲಗೂ ಲಗ್ನ ಮಾಡಿಕೋಬಾರಧ ಶಾಂತಿ? ಆಮ್ಯಾಲ ನಿನ್ನ ಗಂಡಗ ಬಂದು ಗದ್ದ ತುಟಿ ಹಿಡಿದು ರಮಿಸಿ ಎಬ್ಬಿಸ್ತಾನ ದಿನಾ ಮುಂಜಾನೆ"[2] ಎಂದು ರೇಗಿಸುವುದನ್ನು ಕೇಳಿಯೇ 'ಈ ವಯಸ್ಸಿಗೆ ಇಂಥ ಮಾತು ಕೇಳಿ ನಾಚಿಕೆಯಾಗಬೇಕು' ಎನಿಸಿ ಬೇಸರವಾದರೂ ಮದುವೆಯ ಸುದ್ದಿ ಬಂದಾಕ್ಷಣ ಹೃದಯದಲ್ಲೆಲ್ಲೋ ಮಿಸುಕಾಡಿದಂತೆ ಭಾಸವಾಗುವುದು ಆಕೆಯ ನಿರ್ಲಿಪ್ತತೆಯಲ್ಲ "ಆತ್ಮವಂಚನೆ' ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಆಗಾಗ ಕಥೆಯಲ್ಲಿ ಕಥಾನಾಯಕಿ ನೆನಪು ಮಾಡಿಕೊಳ್ಳುವ 'ಅವನು' ಬಹುಶಃ ಗತಕಾಲದ ಆಕೆಯ ಬದುಕಿನ ಪ್ರೇಮ ಪ್ರಕರಣದ ಕಹಿ ಅಧ್ಯಾಯದ ಮೆಲುಕಿನಂತಿದೆ. 'ಏಟೋತ್ರಿಯವ್ವ' ಎಂದು ಹಲ್ಲು ಕಿರಿಯುತ್ತ ಒಳಬಂದ ಮಾದನ ಗೂಗೆಗಣ್ಣಿನ ದೃಷ್ಟಿಯನ್ನು ಗಮನಿಸುವಾಗಲೂ, ಹಾಸ್ಟೆಲಿನ ಮುಂದೆ ಬಾಲ ಅಲ್ಲಾಡಿಸುತ್ತಾ ಬಿದ್ದಿರುವ ಗಂಡು ನಾಯಿಯ ಕಣ್ಣಿನಲ್ಲೂ ಅದೇ ನೋಟವನ್ನು ಕಾಣುವ 'ಆಕೆ ನಾಯಿಯಾದರೇನು, ಗಂಡಲ್ಲವೇ' ಎಂದುಕೊಳ್ಳುವುದಂತೂ ಗಂಡುಜಗತ್ತಿನ ಬಗ್ಗೆ ಆಕೆಗಿರುವ ತೀವ್ರ ಅಸಹನೆಯ ಕುರುಹಾಗಿದೆ. ಸ್ನಾನದ ಕೊಠಡಿಯ ಕನ್ನಡಿಯಲ್ಲಿನ ತನ್ನ ಪ್ರತಿಬಿಂಬದಲ್ಲೂ ಮುಳ್ಳು ಚುಚ್ಚಿದಂತೆ ಅನಿಸುವುದು ಬರೀ ಭ್ರಮೆಯೇ? ಅದು ನಿಜವೇ ಆಗಿದ್ದರೇ ಮೈಯೆಲ್ಲಾ ತೂತಾಗಬೇಕಿತ್ತಲ್ಲಾ ಎಂದುಕೊಳ್ಳುವ ಶಾಂತಿ ತನ್ನ ಸಾಕ್ಷಿಪ್ರಜ್ಞೆಯನ್ನು ಒರೆಹಚ್ಚಿ ನೋಡುವ, ತನ್ನ ಆಲೋಚನೆಯನ್ನು ದೃಢಪಡಿಸಿಕೊಳ್ಳುವ ರೀತಿ ಮನನೀಯವಾಗಿದೆ. "ಶಾಂತಿ ನನ್ನ ಹೃದಯಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ" ಎಂದು ಹಿಂದೆಂದೋ ಅಂದಿದ್ದ ಅವನ ಅಯೋಗ್ಯತನವನ್ನು ನೆನೆಯುವ ಕಥಾನಾಯಕಿ ಅವನ ಕಣ್ಣಿನಲ್ಲೂ ಮುಳ್ಳಿದ್ದವೇ? ಎಂದು ಶೋಧಿಸುವುದು ಜೀವನಾನುಭವ ತಂದುಕೊಡುವ ಪ್ರೌಢತೆಯ ಲಕ್ಷಣವೋ, ಪುರುಷ ಕುಲದ ಬಗೆಗಿನ ಅಸಹನೆಯೋ ಎಂಬ ಚಿಂತನೆಯು ಓದುಗರನ್ನು ಕಾಡುತ್ತದೆ. ಪದೇ ಪದೇ ಅವನ ನೆನಪಾದಾಗ ಇಂತಹದರ ಬಗ್ಗೆ ತಲೆ ಕೆಡಿಸಿಕೊಳ್ಳಲು ತಾನೇನು ಹದಿನೈದರ ಹುಡುಗಿಯೇ ಎಂದುಕೊಳ್ಳುವುದು ಪ್ರೀತಿ, ಪ್ರಣಯಗಳ ಅಥವಾ ಗಂಡುಹೆಣ್ಣಿನ ಪರಸ್ಪರ ಆಕರ್ಷಣೆಯ ವಯೋಸಹಜ ಕಾಮನೆಗಳನ್ನು ಮೀರಿಬೆಳೆಯುವ ಪ್ರೌಢವಾದ ಬದುಕು ಹಾಗೂ ವೃತ್ತಿ ತನ್ನದು ಎಂಬ ಕಥಾನಾಯಕಿಯ ವಿವೇಕದ ಜಾಗೃತಿಯೂ ಹೌದೆನಿಸುತ್ತದೆ. ಆದಾಗ್ಯೂ ಹಾಸ್ಟೆಲಿಗೆ ಬಂದು ತಾನು ಮಾಡಿಕೊಟ್ಟ ಚಹಾದ ರುಚಿಯನ್ನು ಹೊಗಳಿದ ಸಹೋದ್ಯೋಗಿ ದೇಸಾಯಿ 'ನೀವು ಫಸ್ಟ್‌ಕ್ಲಾಸ್ ಹೌಸ್ವೈಫ್ ಆಗತೀರಿ ಬಿಡ್ರಿ' (ಪು. 430) ಎಂದು ಮುಕ್ತವಾಗಿ ಹೊಗಳುವ ಸಮಯದ ಅವನ ನೋಟವನ್ನು ಬಗೆದಾಗ ಅಲ್ಲಿ ಮುಳ್ಳಿಲ್ಲದ ಕಾರಣವೇ ತಾನು ಆತನೊಂದಿಗೆ ಮುಕ್ತವಾಗಿ ಬೆರೆಯಲು ಸಾಧ್ಯವೆಂಬುದನ್ನು ಶಾಂತಿ ಮನವರಿಕೆ

ಮಾಡಿಕೊಳ್ಳುತ್ತಾಳೆ. ಇಲ್ಲಿ ಆಕೆ ಸಂಪೂರ್ಣವಾಗಿ ಪುರುಷ ದ್ವೇಷಿಯಲ್ಲ, ಬದಲಿಗೆ ತನ್ನ ಬದುಕಿನ ಯಾವುದೋ ಸನ್ನಿವೇಶಗಳು ಆಕೆಯನ್ನು ಗಂಡು ಕುಲವನ್ನು ಅಸಹನೆಯಿಂದ ನೋಡುವಂತೆ ಮಾಡಿವೆ ಎಂಬುವುದನ್ನು ಸ್ಪಷ್ಟಪಡಿಸುತ್ತದೆ. ಸದಾ ಸಲ್ಲದ ವಿಚಾರಗಳನ್ನೇ ಮೆಲುಕು ಹಾಕುವ ತನ್ನ ಮನಸ್ಥಿತಿಯನ್ನು ಸುಧಾರಣೆಗೆ ಒಡ್ಡಿಕೊಳ್ಳುವ ಕಥಾನಾಯಕಿ ಸ್ನಾನದ ನಂತರ ಬಹಳ ಹೊತ್ತಿನವರೆಗೆ ಮೈ ಒರೆಸಿಕೊಳ್ಳುತ್ತ ನಿಲ್ಲಬೇಕೆನಿಸುತ್ತದೆ ಯಾಕೆ? ಎಂದು ಮಹಿಳಾ ಸಹೋದ್ಯೋಗಿಗೆ ಕಾರಣ ಕೇಳಿದರೆ ಆ ಮಡಿವಂತ ಸಂಸ್ಕೃತ ಲೆಕ್ಚರರ್ 'ಥೂ... ಹೊಲಸು' ಎನ್ನುವುದು ಆತ್ಮವಂಚನೆ ತಾನೇ? ಎಂದು ತನ್ನನ್ನು ಸಮರ್ಥಿಸಿಕೊಳ್ಳುವಾಗ ಪುರುಷ ಪ್ರಧಾನ ಸಮಾಜದ ನಂಬಿಕೆ, ಆಲೋಚನೆ ಹಾಗೂ ಮೌಲ್ಯಗಳನ್ನು ಆರೋಪಿಸಿಕೊಂಡು ಬದುಕಬೇಕಾದ ಅನಿವಾರ್ಯತೆಯಲ್ಲಿ ಮಹಿಳೆ ಸಭ್ಯತೆಯ ಸೋಗಿನ ಮುಖವಾಡ ಧರಿಸುವುದೂ ಕೂಡ ಕಪಟವೇ ಎಂಬ ಧ್ವನಿ ವ್ಯಕ್ತವಾಗಿದೆ. ಡೈನಿಂಗ್ ಹಾಲಿನ ಗದ್ದಲದ ನಡುವೆ ಶಾಂತವಾಗಿ ಊಟ ಮಾಡಲೂ ಬಿಡದ ಗದ್ದಲದ ಹುಡುಗಿಯರ ಗುಂಪನ್ನು ನೋಡಿ ತನ್ನ ಆತ್ಮಾವಲೋಕನ ಮಾಡಿಕೊಳ್ಳುವ ಆಕೆ ತಾನು ಹೊಸದಾಗಿ ಕೆಲಸಕ್ಕೆ ಸೇರಿದಾಗ ಸಂಬಂಧವಿಲ್ಲದವರ ಪ್ರೇಮ ಪ್ರಕರಣದ ಬಗ್ಗೆ ತಾನೂ ಗಂಟೆಗಟ್ಟಲೆ ಚರ್ಚೆಮಾಡುತ್ತಿದ್ದು, "ಈಗೇಕೆ ಈ ಬೇಸರ, ನಿರ್ಲಿಪ್ತತೆ? ಶೂನ್ಯತೆ? ಈ ಭ್ರಮೆ ಒಳ್ಳೆಯದೋ, ಭ್ರಮನಿರಸನ ಒಳ್ಳೆಯದೋ, ಹಾಗಾದರೆ ತನ್ನ ಸುತ್ತಲಿನ ಈ ಜಗತ್ತು.. ಅವನು ಭ್ರಮೆಯೇ ಎಂದುಕೊಳ್ಳುವುದರ ಜೊತೆಗೆ "ಇಲ್ಲ ಮುಳ್ಳಿನಂತೆ ಚುಚ್ಚುವ ದೃಷ್ಟಿಯೊಂದೇ ಸತ್ಯ, ಉಳಿದುದೆಲ್ಲಾ, ಈ ಇಡೀ ಜಗತ್ತಿನ ತುಂಬಾ ಸತ್ಯವಾದುದೆಂದರೆ ಅದೊಂದೇ. ಸಣ್ಣ ಹುಡುಗನಿರಲಿ, ತರುಣನಿರಲಿ, ಮುದುಕನಿರಲಿ ಪ್ರತಿಯೊಂದು ಗಂಡಿನ ಕಣ್ಣಲ್ಲೂ ಅದೇ ಮುಳ್ಳುಮೊನೆ. ಒಂಟಿ ಹೆಣ್ಣನ್ನು ಅದರಲ್ಲೂ ಹುಡುಗಿಯನ್ನು, ನೋಡಲು ಸ್ವಲ್ಪ ಚೆನ್ನಾಗಿರುವವಳನ್ನು ಕಂಡರೆ ಸಾಕು ಒಂದೇ ಸಮನೆ ಚುಚ್ಚುತ್ತವೆ ಈ ಮುಳ್ಳುಗಳು..." ಹೀಗೆ ಭಾವಿಸುವುದಂತೂ ಕಥೆಯ ತಾರಕ ಮಂತ್ರದಂತೆ ಗೋಚರಿಸುವುದರ ಜೊತೆಗೆ ಪುರುಷಲೋಕದ ಮೀಮಾಂಸೆಯಂತೆ ತೋರುತ್ತದೆ. ಈ ಮುಳ್ಳುಗಳಿಂದ ದೂರದೂರ ಬರೇ ಹೂವುಗಳಿರುವ ದ್ವೀಪಕ್ಕೆ ತನ್ನನ್ನು ಕರೆದೊಯ್ಯಬಹುದೆಂಬ ವಿಶ್ವಾಸದೊಂದಿಗೆ ಪ್ರೀತಿಮಾಡಿ ಮೋಸಮಾಡಿದ ಆತ ಕೂಡ ದೊಡ್ಡ ಭ್ರಮೆ. ಅದರ ನಿರಸನವಾದುದು ಅವನ ಕಣ್ಣಿನ ನೋಟದಲ್ಲಿ ಹುದುಗಿದ್ದ ಮುಳ್ಳಿನ ಅರಿವಾದಾಗ ಮೂಡಿದ ಆಘಾತ, ಹೃದಯ ಬಿರಿದ ಅನುಭವ.... ಕಲಸಿದ್ದ ಅನ್ನ ಗಂಟಲಲ್ಲಿ ಇಳಿಯಲೊಲ್ಲದೆ ಹಳೆಯ ವಿಚಾರಗಳ ಗೊಂದಲದಿಂದ ಊಟದ ಮಧ್ಯೆ ಕೈತೊಳೆದು ಹೋದ ಕಥಾನಾಯಕಿ ಒಂದು ಕ್ಷಣ ಮರುಕಕ್ಕೆ ಒಳಗಾಗುತ್ತಾಳೆ. ಕಾಲೇಜು ಅಧ್ಯಾಪಕಿಯಾಗಿ ಪುರುಷರ ಬಗ್ಗೆ ಅಸಹನೆ ಮೂಡಿಸಿಕೊಂಡಿರುವ ಕಥಾನಾಯಕಿ ಶಾಂತಿಯ ಮನಸ್ಥಿತಿಯು ವಿದ್ಯಾರ್ಥಿಗಳ ಹಗುರವಾದ ನಡತೆಯನ್ನು ನೋಡಿ ಸಿಡಿಮಿಡಿಗೊಳ್ಳುವುದರ ಮೂಲಕ ಕಾಲೇಜು ಹುಡುಗರ ಕಲಿಯುವ ವಯಸ್ಸಿನ ಅಪ್ರಬುದ್ಧ ನಡವಳಿಕೆಯನ್ನು ಅತ್ಯಂತ ಸಹಜವಾದ ನೆಲೆಯಲ್ಲಿ ಕಥೆಯು ಅನಾವರಣಗೊಳಿಸಿ ರುವುದು ಗಮನಾರ್ಹ.

ದಿನನಿತ್ಯ ಕಾಲೇಜಿಗೆ ಹೋಗುವಾಗ ಮಾಡಿಕೊಳ್ಳುವ ಮೇಕಪ್ ಬಗೆಗೂ ಕೂಡ 'ಯಾವ ಸೀರೆ ಉಟ್ಟು ಯಾರನ್ನು ಮೆಚ್ಚಿಸಬೇಕಾಗಿದೆ' ಎಂದು ಅಭಾವ ವೈರಾಗ್ಯ ತೋರುವ ಆಕೆಗೆ 'May I feel your sari' (ಪು–432) ಎಂದು ಸೆರಗು ಮುಟ್ಟಲು ಮುಂದಾಗುವ ಸಹೋದ್ಯೋಗಿಗಳ ಬೆರಳುಗಳ ಸ್ಪರ್ಶ ಮುಳ್ಳಿನ ಕರೆಂಟ್ ಸೆರಗಿಗೆ ಹರಿದಾಡಿದಂತೆ ಮೈ ಜುಮ್ಮೆನ್ನಿಸುವುದು ಅತಿಯಾದ ಆತಂಕದಂತೆ ತೋರಿದರೂ ಆರೋಗ್ಯವಂತ ಸಮಾಜವೆಂದು ನಾವು ಭಾವಿಸುವ ವಿದ್ಯಾವಂತರ ನಡುವೆಯೂ ವಿದ್ಯಾವಂತ ಮಹಿಳೆಯನ್ನು ಕಾಡುತ್ತಿರುವ ಅಸುರಕ್ಷಿತ ಭಾವ

ಸ್ಫುಟಗೊಂಡಿದೆ. ಇದಲ್ಲದೆ 'Good morning madam' ಎನ್ನುವ ಸ್ಟೈಲಿಷ್ ಶಿಷ್ಯೋತ್ತಮ ಶಂಕರಶೆಟ್ಟಿ ಕಳೆದ ವರ್ಷ ತನ್ನನ್ನು ಸಿನಿಮಾ ನೋಡಲು ಕರೆದ ಕಹಿ ನೆನಪು ಭಾಸಿಗೊಳಿಸುತ್ತದೆ. ಗುರುವಾದರೂ ಕೂಡ ಆಕೆ ಹೆಣ್ಣು ಎಂಬ ಪುರುಷ ಪ್ರಜ್ಞೆ ಅವನ ವರ್ತನೆಯಲ್ಲಿ ಎದ್ದು ಕಾಣುತ್ತದೆ. "ಗಾಂಧಿ ಹೇಳಿರುವಂತೆ ಹೆಣ್ಣು ಬೇರೆ, ಗಂಡು ಬೇರೆ, ಆದರೆ ಇಬ್ಬರೂ ಸಮಾನರು, ಇದು ಎಷ್ಟು ಸೂಕ್ಷ್ಮ ವಿಷಯವೆಂದರೆ ಸಮಾನತೆ ಎಂದು ವಿಭಿನ್ನತೆ ಮರೆತರೆ ಕರ್ತವ್ಯ ಲೋಪವಾಗುತ್ತದೆ. ವಿಭಿನ್ನತೆ ಎಂದು ಸಮಾನತೆ ಮರೆತರೆ ಹಕ್ಕು ಕಳೆದು ಹೋಗುತ್ತದೆ. ಈ ಎರಡರ ಸಮನ್ವಯವನ್ನು ಕಾಪಾಡಿಕೊಳ್ಳುವುದು ಇಂದಿನ ಮಹಿಳೆಯ ಅತಿ ದೊಡ್ಡ ಸವಾಲು"[3] ಇದರೊಂದಿಗೆ ತರಗತಿಗೆ ಕಾಲಿಟ್ಟೊಡನೆ ಬೋರ್ಡಿನ ಮೇಲೆ ಯಾರೋ ಪ್ರೇಮವೀರ ಬರೆದ 'I love you' ಬರಹ ಅಸಹನೀಯವೆನಿಸುತ್ತದೆ. ಇವೆಲ್ಲಾ ಅಂಶಗಳು ಕಾಲೇಜಿನ ಮಾಮೂಲಿ ಸಂಗತಿಗಳಾದರೂ ಪುರುಷ ಜಗತನ್ನು ಅಸಹನೆಯಿಂದ ಕಾಣುವ ಕಥಾ ನಾಯಕಿಯ ಮನೋಧರ್ಮವನ್ನು ಜೀವಂತಗೊಳಿಸಿದೆ. "ಇವತ್ತಿನ ಸಮಾಜಕ್ಕೆ ಹೆಣ್ಣಿನ ಶಕ್ತಿ, ಸಾಮರ್ಥ್ಯ, ಜ್ಞಾನದಲ್ಲಿ ನಂಬಿಕೆಯೇ ಇಲ್ಲವಾಗಿದೆ. ಒಂದೋ ಹೆಣ್ಣನ್ನು ಅಸಡ್ಡೆಯಿಂದ ಕಾಣುವುದು ಅಥವಾ ಅವರನ್ನು ತಮ್ಮ ರಕ್ಷಣಾ ಕೋಟೆಯೊಳಗೆ ತೆಗೆದುಕೊಂಡು ಪೊರೆಯುವುದು– ಇವರೆಡರಲ್ಲಿ ಒಂದು ಮಾತ್ರ ಹೆಣ್ಣಿನ ಕುರಿತು ಗಂಡಿಗಿರುವ ಸಾಮಾನ್ಯ ಧೋರಣೆ".[4]

ಈ ಸಮಾಜದಲ್ಲಿ ಪುರುಷರು ಹೆಂಗಸರಲ್ಲಿ ಬಯಸುವುದು ವಿಧೇಯತೆಯನ್ನು ಮಾತ್ರ, ಸಿಡಿದುಬೀಳುವ, ರೊಚ್ಚಿಗೇಳುವ, ಪ್ರಶ್ನೆ ಮಾಡುವ ಹೆಂಗಸನ್ನು ಯಾವ ಪುರುಷನೂ ಮೆಚ್ಚಲಾರನೆಂಬ ಕಥಾನಾಯಕಿಯ ಅನಿಸಿಕೆ ಇಂದಿಗೂ ಅಸತ್ಯವೇನಲ್ಲ. ಕಾಲೇಜಿನ ಕ್ರಿಶ್ಚಿಯನ್ ವಿದ್ಯಾರ್ಥಿಯೊಬ್ಬ 'Lovely' ಎಂಬ ವಿಶೇಷಣವನ್ನು ವಾಕ್ಯದಲ್ಲಿ ಬಳಸಲು ಹೇಳಿದ ಆಕೆಗೆ. 'Madam you are lovely' ಎನ್ನುವುದು ಪ್ರಾಮಾಣಿಕ ಅಭಿವ್ಯಕ್ತಿಯೆನಿಸಿ ಅವನ ಎರಡರಷ್ಟು ವಯಸ್ಸಿನ ತನಗೆ ನೀಡಿದ ಹಗುರ ಪ್ರತಿಕ್ರಿಯೆ ಎಂಬ ಸೆಂಟಿಮೆಂಟಲ್ ವಿಚಾರಗಳು ತಲೆಯಲ್ಲಿ ಬಂದು ಇಡೀ ಜಗತ್ತು ತನ್ನನ್ನು ಅವಮಾನಿಸುತ್ತಿರುವಂತೆ ಭಾಸವಾಗಿ ಒಬ್ಬೊಬ್ಬರನ್ನೂ ಜೀವಂತ ಸುಡುವುದರ ಜೊತೆಗೆ ತಾನೂ ಬೆಂಕಿಯಲ್ಲಿ ಬಿದ್ದು ಬೆಂದುಹೋಗಬೇಕೆಂಬ ಭಾವತೀವ್ರತೆಯಲ್ಲಿ ನಿಜವಾಗಿ ತನ್ನ ಬದುಕಿನ ಕಷ್ಟ ಪರಿಹಾರವೆಂದರೆ ಕ್ಲಾಸ್ ಮುಗಿಯಿತೆಂದು ಘಂಟೆ ಹೊಡೆಯುವ ಪ್ಯೂನ್ ಒಬ್ಬನೇ ಎಂದು ನಿರಾಳವಾಗುವಾಗ "ಹಲೋ ಮಿಸ್ ಶಾಂತಿ, ಟೀ ಗೆ ಬರ್ತೀರೇನು? ಎಂದು ಕೇಳಿದ ಪ್ರೊ.ದೇಸಾಯಿಯ ಮುಗ್ಧತೆ, ನಿಷ್ಕಪಟ ಭಾವ ಮಾತ್ರ ಎಲ್ಲರಿಗಿಂತ ಭಿನ್ನವಾಗಿ ತೋರಿ ಮತ್ತೆ ಮುಳ್ಳುಗಳಿಲ್ಲದ, ಹೂಗಳಿರುವ ದ್ವೀಪದ ಬಗ್ಗೆ ವಿಚಾರಗಳು ಮೂಡಿ 'ಇವನ ಕಣ್ಣಲ್ಲೂ ಮುಳ್ಳುಗಳು ಕಂಡರೆ ಎಷ್ಟು ಒಳ್ಳೆಯದು! ಆಗ ಮುಳ್ಳುಗಳೆಂದರೆ ಜೀವನದ ಅನಿವಾರ್ಯ ಭಾಗಗಳೆಂದು ಸುಲಭವಾಗಿ ನಂಬಬಹುದಿತ್ತು' ಎಂದು ಶಾಂತಿ ಭಾವಿಸುವುದು ಪುರುಷರೆಲ್ಲರೂ ಕೆಟ್ಟವರಲ್ಲ ಎಂಬ ಉದಾರ ಚಿಂತನೆಯ ಗುರುತಾಗಿದೆ. ಆದರೂ ಪುರುಷರ ಬಗೆಗಿನ ತನ್ನ ಮನದ ದ್ವಂದ್ವವನ್ನು ಹತ್ತಿಕ್ಕಿ, ದೃಢ ನಿರ್ಧಾರಕ್ಕೆ ಬರಲು ಸಾಧ್ಯವಾಗದ ಶಾಂತಿ ಸಹೋದ್ಯೋಗಿ ದೇಸಾಯಿಯ ಕಡೆಯಿಂದ ಬಂದ ಫಿಲ್ಮ್ ಶೋ ನೋಡುವ ಆಹ್ವಾನವನ್ನು ನಿರಾಕರಿಸಲಾರದೆ ರಾತ್ರಿಯ ವೇಳೆ ಯಾರಾದರೂ ವಿದ್ಯಾರ್ಥಿಗಳು ತಮ್ಮನ್ನು ನೋಡಿ ಕಾಲೇಜಿನಲ್ಲಿ ಗದ್ದಲ ಮಾಡಬಹುದೆಂದು ಆತಂಕಗೊಳ್ಳುವುದು ಗಂಡಸರಿಂದ ದೂರಾಗುವ ಪ್ರಬಲ ಇಚ್ಛೆಯಿದ್ದರೂ ದೇಸಾಯಿಗೆ 'ಹ್ಞೂ' ಎಂದು ಉತ್ತರಿಸಲು ಕಾರಣವೇನು ಎಂದು ತನ್ನನ್ನೇ ವಿಶ್ಲೇಷಣೆಗೆ ಒಳಪಡಿಸಿಕೊಳ್ಳುತ್ತಾ, ಇಂತಹ ಸಲ್ಲದ ವಿಚಾರಗಳಿಂದಲೇ ತನ್ನ ತಲೆ ಅರ್ಧ ಬೆಳ್ಳಗಾಗಿದೆ

ಇದನ್ನು ಬಿಡಬೇಕು ಎಂದುಕೊಂಡರೂ ಹೊಸದಾಗಿ ಕಾಲೇಜಿನ ಕೆಲಸಕ್ಕೆ ಸೇರಿದ ಪುಣೆಯ ಹುಡುಗ ವಡಗಾಂವಕರ ಬ್ಯಾಡ್ಮಿಂಟನ್ ಆಟಕ್ಕೆ ಪಾರ್ಟ್ನರ್ ಆಗಲು ಕರೆದಾಗ, ಟೂರ್ನಾಮೆಂಟನ್ಯಾಗಾ? ಎಂದ ವೇಳೆ ಪೆಚ್ಚಾದ ಆತನ ಮುಖವನ್ನು ನೋಡುತ್ತಲೇ 'ಹ್ಞೂ! ಯಾಕ ನೀವು ಈಗಾಗಲೇ ಬ್ಯಾರೆ ಯಾರ್ನರಾ ಸೆಲೆಕ್ಟ ಮಾಡಿರೇನು? ಎನ್ನುವ ಆತನ ಸಹಜವಾದ ಮಾತಿಗೆ 'ಇಲ್ಲ ಅಂಥಾ ಅಯೋಗ್ಯರು ಇನ್ನೂ ಯಾರೂ ಕಣ್ಣಿಗೆ ಬಿದ್ದಿಲ್ಲ' ಎಂದು ಉತ್ತರಿಸುವುದು ತನ್ನ ಪ್ರಪಂಚದ ಸುತ್ತಲಿನ ಗಂಡು ಕುಲವೆಲ್ಲಾ ಅಯೋಗ್ಯರೇ ಎಂಬ ಏಕ ಪಕ್ಷೀಯ ತೀರ್ಮಾನದಂತೆ ತೋರುತ್ತದೆ. 'ನೋಡೋಣ' ಅಂದರೂ ರ್‍ಯಾಕೆಟ್ ಬೀಸಿ ಒಗೆದು ಹೊರಟ ಆಕೆಗೆ ಯಾಕೋ ಎಲ್ಲರ ಮೇಲೂ ಅಗಾಧ ಸಿಟ್ಟು ಬರತೊಡಗುತ್ತದೆ.

ಅಂತೂ ಇಂತೂ ಗೊಂದಲದ ನಡುವೆ ನೋಡಿದ ಫಿಲ್ಮ ಶೋವನ್ನು 'ದರಿದ್ರ' ಎಂದು ಭಾವಿಸುವುದು, ಹಾಸ್ಟೆಲ್ ಗೆ ರಾತ್ರಿಯ ವೇಳೆ ಪ್ರೊ. ದೇಸಾಯಿಯೊಡನೆ ಹೋಗುವಾಗಿನ ಆಕೆಯ ಆತಂಕ ದ್ವಂದ್ವಗಳಂತೂ ಈ ಸಮಾಜದ ಅವಿವಾಹಿತ ಮಹಿಳೆಯೊಬ್ಬಳ ಧಾವಂತ ಸ್ಥಿತಿಯನ್ನು ಸಹಜವಾದ ನೆಲೆಯಲ್ಲಿ ತೆರೆದಿಡುತ್ತದೆ. ಇದೇ ಸಮಯದಲ್ಲಿ ಹಿಂದೆ ನೌಕರಿಗೆ ಸೇರುವ ವೇಳೆ ತನ್ನ ತಂದೆ ಹೇಳಿದ್ದ "ಎಷ್ಟು ಕಲಿತರೇನು, ಎಷ್ಟೇ ದೊಡ್ಡ ಕೆಲಸ ಇದ್ದರೇನು, ಬೇಕಾದಂತ ಸೋಷಿಯಲ್ ಪೊಜಿಷನ್ ಇದ್ದರೇನು, ಹೆಣ್ಣು ಮಕ್ಕಳು ಒಬ್ಬೊಬ್ಬರ ಇರೂದಂದ್ರ ಬಾಳ ಕಠಿಣ ಅದನವ ಶಾಂತೂ, ದೂರ ಇರಾಕಿ, ನಿನ್ನ ದೇವರು ಕಾಯಬೇಕು" (ಪು–436) ಎಂಬ ಮಾತು ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಹೆತ್ತ ಪ್ರತಿ ತಂದೆಯ ಆತಂಕವನ್ನು ಜೀವಂತವಾಗಿ ಕಣ್ಮುಂದೆ ತರುತ್ತದೆ. "ಈ ದೇಶದಲ್ಲಿನ ಪಿತೃಸಂಸ್ಕೃತಿ ಯಾವರೀತಿಯಾಗಿ ಮಹಿಳೆಯರನ್ನು ಬದುಕಿನುದ್ದಕ್ಕೂ ಪುರುಷರನ್ನೇ ಅವಲಂಬಿಸುವಂತೆ, ಎಂದೂ ಸ್ವತಂತ್ರವಾಗಿ ಬದುಕಲು ಅರ್ಹಳೆನಿಸದಂತೆ ಇರಿಸಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ."[5] ಪುರುಷ ರಕ್ಷಣೆಯಲ್ಲಿ ಮಾತ್ರ ಮಹಿಳೆ ಸುರಕ್ಷಿತ ಎಂಬ ನಮ್ಮ ಸಮಾಜದ ಪ್ರಬಲ ನಂಬಿಕೆಯ ಪ್ರತೀಕವಾದ ಅಪ್ಪನಿಗೆ ಏನು ಗೊತ್ತು? ಕತ್ತಲಲ್ಲಿಯ ವಾಕಿಂಗ್ ಮಜಾ! ಎಂದು ಶಾಂತಿ ಅಂದು ಭಾವಿಸುವುದು ಹೂತಿಟ್ಟ ಸ್ತ್ರೀಯ ಮನದಾಳದ ಬಯಕೆಗಳ ಸಂಕೇತವಾಗಿದೆ.

ಫಿಲ್ಮ ಶೋ ಮುಗಿಸಿ ಹಾಸ್ಟೆಲ್ ಗೆ ಹಿಂದಿರುಗುವಾಗ ಉದ್ವಿಗ್ನಳಾಗುವ ಕಥಾ ನಾಯಕಿ ಪ್ರೊ. ದೇಸಾಯಿಯಿಂದ ಏನಾದರೂ ಅನಾಹುತವಾಗಬಹುದೇ ಎಂಬ ಭಯ ಹಾಗೂ ಗೊಂದಲದಲ್ಲಿ ಹಾಸ್ಟೆಲ್ಲಿನ ಗೇಟ್ ತಲುಪುವಾಗ ಹೃದಯ ತುಂಬಿ ಹರಿಯುವುದರೊಂದಿಗೆ ಸುರಕ್ಷಿತವಾಗಿ ಬಂದೆನಲ್ಲಾ ಎಂಬ ಸಮಾಧಾನವೇ ಅಥವಾ ಏನೂ ಮಜಾ ನಡೆಯಲಿಲ್ಲವಲ್ಲ ಎಂಬ ಅಸಮಾಧಾನವೇ? ಎಂದು ಆತ್ಮಾವಲೋಕನ ಮಾಡಿಕೊಳ್ಳುವುದಂತೂ ಸ್ತ್ರೀ ಪುರುಷರ ನಡುವಿನ ಏಕಾಂತದ ಸಂದರ್ಭದ ಅನಿಶ್ಚಿತತೆ ಹಾಗೂ ಉದ್ವಿಗ್ನತೆಗಳಿಗೆ ಕನ್ನಡಿ ಹಿಡಿದಿದೆ. ಥ್ಯಾಂಕ್ಸ್, ಗುಡ್ ನೈಟ್, ಎಂದು ಪ್ರೊ.ದೇಸಾಯಿಗೆ ಹೇಳಿ ಒಳಗೋಡಿದ ಶಾಂತಿ ಎಂಥದೋ ಅನಿರ್ದಿಷ್ಟ, ಅಸ್ಪಷ್ಟ ಮಧುರ ಭಾವನೆಯಿಂದ ಕೂಡಿ ಕೋಣೆಯ ದೀಪ ಹಾಕಿದರೆ ಅದೆಲ್ಲಿ ಕಳೆದು ಹೋಗುವುದೋ ಎಂದು ಕತ್ತಲಲ್ಲಿ ಕಾಟ್ ಮೇಲೆ ಬಿದ್ದುಕೊಳ್ಳುವುದು ಪುರುಷ ಸಾಮೀಪ್ಯದಿಂದ ಅವಿವಾಹಿತ ಸ್ತ್ರೀಯ ಮನದಲ್ಲಿ ಉಂಟಾಗುವ ಆಂದೋಲನ, ಆಕರ್ಷಣೆ, ಅದನ್ನು ಮೀರಿ ನಿಲ್ಲಬೇಕಾದ ಅನಿವಾರ್ಯತೆಯ ಜೊತೆಗೆ ಮಹಿಳೆಯೊಬ್ಬಳ ಜೀವನದ ಮಿತಿಯನ್ನು ಅತ್ಯಂತ ಅರ್ಥಪೂರ್ಣವಾಗಿ ದಾಖಲಿಸುತ್ತದೆ.

ನೆಮ್ಮದಿಯಾಗಿ ನಿದ್ರಿಸಲು ಬಿಡದೇ ಸೊಳ್ಳೆಗಳಂತೆ ಕಾಡುವ ಪುರುಷರ ಆಲೋಚನೆಯಲ್ಲಿ ಪರದೆ ಹಾಕಿ ಮಲಗಲು ಬೇಸರಿಸುವ ಕಥಾನಾಯಕಿ ತನ್ನ ಸುತ್ತಮುತ್ತಲಿನ ಪುರುಷ ಜಗತ್ತಿನ ಮಾತುಗಳನ್ನು ನೆನೆದು ಘಾಸಿಗೊಳ್ಳುವ ಸನ್ನಿವೇಶ ಕಥೆಯ

ಅರ್ಥಪೂರ್ಣತೆಗೆ ಸಾಕ್ಷಿಯಾಗಿದೆ. ಇಲ್ಲಿ ಸೊಳ್ಳೆ ಹಾಗೂ ಪರದೆ ಎಂಬ ಪದ ಬಳಕೆ ವಿಶಿಷ್ಟ ಅರ್ಥವನ್ನು ಪಡೆದುಕೊಂಡಿವೆ.

*ಬರುತ್ತಿರಾ, ಮಿಸ್ ಶಾಂತಿ ನನ್ನ ಜೊತೆ?*

*ಟೀ ಗೆ ಬರುತ್ತಿರಾ ಶಾಂತಿ?*

*ಬ್ಯಾಡ್ಮಿಂಟನ್ ಆಡಲಿಕ್ಕೆ ಬರುತ್ತೀರಾ ಶಾಂತಿ?*

*ಫಿಲ್ಮ ಶೋ ನೋಡಲಿಕ್ಕೆ ಬರುತ್ತೀರಾ ಶಾಂತಿ?*

*ಮ್ಯಾಡಮ್ ಪಿಚ್ಚರ್‌ಗೆ ಬರುತ್ತೀರಾ?*

ಈ ಆಹ್ವಾನಗಳು ಹತ್ತಾಗಿ, ನೂರಾಗಿ ಈ ದನಿಗಳು ಎಲ್ಲಿಯವು? ಯಾರು ಹೀಗೆ ಕರೆಯುವರು? ಎಲ್ಲಿದ್ದಾರೆ? ಹೀಗೆ ತನಗೆ ಬಹಿರಂಗವಾಗಿ ಅವಮಾನಿಸಲು ಈ ಅಯೋಗ್ಯರಿಗೆ ಎಷ್ಟು ಧೈರ್ಯ ಎಂಬ ಪೂರ್ವಗ್ರಹಪೀಡಿತ, ಬಾಲಿಶ ಹಾಗೂ ಅನಾರೋಗ್ಯಕರ ಆಲೋಚನೆಗಳೊಂದಿಗೆ ಒಬ್ಬೊಬ್ಬರನ್ನು ಒದ್ದು ಕಳುಹಿಸಬೇಕು ಎಂದುಕೊಳ್ಳುವುದು ದ್ವಂದ್ವವನ್ನು ಮೀರಲಾರದ ಹಾಗೂ ಪುರುಷ ವರ್ತನೆಯ ಬಗ್ಗೆ ಖಚಿತ ನೆಲೆಗೆ ಬರಲಾರದ ಶಾಂತಿಯ ಮನೋಭಾವವನ್ನು ಅನಾವರಣಗೊಳಿಸುತ್ತದೆ. ಸೊಳ್ಳೆ ಪರದೆ ಹಾಕದಿದ್ದರೆ ಸೊಳ್ಳೆಗಳಂತೆ ಕಾಡುವ ಗಂಡಸರು ನಿದ್ರಿಸಲು ಬಿಡಲಾರರೆಂದು ಪರದೆ ಕಟ್ಟಿ ಮೈತುಂಬಾ ಹೊದ್ದು ಮಲಗಿದ್ದರೂ ಒಂದೂ ಸೊಳ್ಳೆ (ಪ್ರೊ. ದೇಸಾಯಿ) ಪರದೆಯೊಳಗೆ ತಪ್ಪಿಸಿಕೊಂಡು ಬಂದು ಗುಯ್ ಎಂದರೂ ನಿದ್ರೆಗೆ ಬಹಳ ಭಂಗ ಬಾರದೆಂದು ಭಾವಿಸಿ ಒಂಟಿ ಸೊಳ್ಳೆಗಾಗಿ ತಾನೇಕೆ ಎದ್ದು ದೀಪ ಹಾಕುವ ತ್ರಾಸು ತೆಗೆದುಕೊಳ್ಳಬೇಕು? ಎಂದುಕೊಳ್ಳುತ್ತಲೇ ಬಾರದ ನಿದ್ರೆಗೆ ಸೋಲಬಾರದು, ನಿದ್ರೆ ಬರಿಸಿಕೊಳ್ಳುವ ಸುಲಭ ಸಾಧನವೆಂದರೆ ಭವಿಷ್ಯದ ಬಗೆಗೆ ನಿಷ್ಫಲ, ಆದರೆ ಸವಿಯಾದ ಕನಸು ಕಾಣುವುದೊಂದೇ ದಾರಿ ಮುಳ್ಳುಗಳ ನೆನಪಿನಿಂದ ದೂರ ಹೋಗಲು ಎಂಬ ವಾಸ್ತವಿಕ ಅರಿವಿಗೆ ಜಾರುವುದು ಆರೋಗ್ಯಕರವಾದ ಚಿಂತನೆಯಾಗಿದೆ.

ಮುಂಜಾನೆ ನಾಳೆಯಲ್ಲ, ಮುಂದೊಂದು ದಿನ ಮುಂಜಾನೆ ತನ್ನನ್ನು ಎಬ್ಬಿಸಲು ಬರುವ ಗಂಡನ ಕನಸು ಕಾಣುತ್ತ ಸಹಜ ಆಲೋಚನೆಗೆ ಬಂದ ನಂತರ ನಿದ್ರೆಗೆ ಜಾರುತ್ತಾ ಶಾಂತಿ ದೇಸಾಯಿಯ ನೆನಪಿನಿಂದ ಹೊರಬರುವ ಪ್ರಯತ್ನ ಮಾಡುವುದು ವರ್ತಮಾನದ ಆಶಾದಾಯಕ ವಿಚಾರಗಳಿಂದ ಬರುವ ಸಕಾರಾತ್ಮಕ ಬದಲಾವಣೆಯಾಗಿದೆ.

ಒಟ್ಟಾರೆಯಾಗಿ ವಿದ್ಯಾವಂತ ಅವಿವಾಹಿತ ಮಹಿಳೆಯೊಬ್ಬಳ ಪುರುಷ ಜಗತ್ತನ್ನು ಕುರಿತ ಅಸಹನೆಯನ್ನು ಅನಾವರಣಗೊಳಿಸುತ್ತಲೇ ಸ್ತ್ರೀ ಬದುಕಿನ ಪರಿಪೂರ್ಣತೆಗೆ ಪುರುಷನ ಸಾಂಗತ್ಯ ಅನಿವಾರ್ಯವಲ್ಲದಿದ್ದರೂ ಅಗತ್ಯ ಎಂಬುದನ್ನು ಡಾ. ವೀಣಾಶಾಂತೇಶ್ವರರವರು ಈ ಕಥೆಯ ಮೂಲಕ ಅರ್ಥಪೂರ್ಣವಾಗಿ ತಿಳಿಸಿದ್ದಾರೆ.

**ಕೊನೆಟಿಪ್ಪಣಿಗಳು**

1. ವೀಣಾಶಾಂತೇಶ್ವರ. (2001). *ಸಣ್ಣ ಕಥೆಗಳು.* ಕನ್ನಡ ಸಾಹಿತ್ಯ ಅಕಾಡೆಮಿ. ಪು.428
2. ಅದೇ. ಪು.429
3. ಅನುಪಮ ಎಚ್.ಎಸ್. (2016). *ಮಹಿಳೆ ದಲಿತ ತತ್ವ ಮತ್ತು ರಾಜಕೀಯ ಪ್ರಜ್ಞೆ,* ಲಡಾಯಿ ಪ್ರಕಾಶನ. ಪು.54.
4. ಅನುಪಮ ಎಚ್.ಎಸ್. (2020). ಹೆಣ್ಣು ಹೆಜ್ಜೆ ಮಹಿಳಾ ಮಾದರಿ–ಮಾರ್ಗ. ಲಡಾಯಿ ಪ್ರಕಾಶನ. ಪು. 168.
5. ಸುಮಿತ್ರಾಬಾಯಿ. ಬಿ.ಎನ್. *ಮಹಿಳೆ ಮತ್ತು ಸಾಹಿತ್ಯ.* ಶ್ರೀಮತಿ ಯಶೋಧಾರಾಗೌ ಟ್ರಸ್ಟ್.